ಕಲಿಕೆ ಚಾಲನಾ ಅನುಜ್ಞಾ ಪತ್ರಗಳನು ಕೊಡಂವುದರಲ್ಲಿ ಆಗುತ್ತಿರುವ ವಿಳಂಬ

೬೫೫. ಶ್ರೀ ಪೆರಿಕಲ್ ಎಂ. ವಂಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಜನವರಿ ೧೯೬೧ರ ಮಾಹೆಯಲ್ಲಿ ಬೆಂಗಳೂರು ನಗರದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ನೀಡಲ್ಪಟ್ಟ ಕಲಿಕೆ ಚಾಲನಾ ಅನುಜ್ಞಾ ಪತ್ರಗಳು ಎಷ್ಟು ?

(ಆ) ಅವುಗಳನ್ನು ನೀಡಲು ತೆಗೆದುಗೂಂಡ ಕಾಲ ಎಷ್ಟು?

(ಇ) ಅರ್ಜಿ ಸಲ್ಲಿಸಿದ ದಿನವೇ ಈ ಕಲಿಕೆ ಅನುಜ್ಞಾ ಪತ್ರಗಳನ್ನು ನೀಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಜೆ. ಜಾರ್ಜ್ ಸಾರಿಗೆ (ರಾಜ್ಯ ಸಚಿವರು).—

(ಅ) ೯,೨೫೧.

(ಆ) ಹೆಚ್ಚು ವಿಳಂಬ ವಾಡದೆ ಕಲಿಕೆ ಅನುಜ್ಞಾ ಪತ್ರಗಳನ್ನು ನೀಡಲಾಗುತ್ತಿದೆ.

(ಇ) ಅಭ್ಯರ್ಥಿಯು ಸಂಚಾರಿ ನಿಯಮಂದ ಬಗ್ಗೆ ತಿಳಿದಿರುವುದನ್ನು ಪರೀಕ್ಷಿಸಲು ಹಾಗೂ ಇತರೆ ಕ್ರಮಗಳು ಒಳಗೊಂಡಿರುವುದರಿಂದ ಕಲಿಕೆ ಅನುಜ್ಞಾ ಪತ್ರಗಳನ್ನು ಅದೇ ದಿನವೇ ಕೊಡಲು ಸಾಧ್ಯವಾಗುವುದಿಲ್ಲ.

ಹಸಿರು ಪಡಿತರ ಚೀಟಿ ಪಡೆಯಲು ವ್ಯಕ್ತಿಗೆ ಇರಬೇಕಾದ ಅರ್ಹತೆಗಳು

೬೫೮ ಶ್ರೀ ಕೆ. ಸಿ. ಮಂಡ್ಲೇಕರ್ ದೇಸಾಯಿ (ಬಾಗೇವಾಡಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಹಸಿರು ಪಡಿತರ ಚೀಟಿ ಪಡೆಯಲು ವ್ಯಕ್ತಿಯೊಬ್ಬನಿಗೆ ಇರಬೇಕಾದ ಅರ್ಹತೆಗಳೇನು?

(ಆ) ಬೆಳಗಾಂ ಸಿಟಿ, ಕಾನ್‌ಪುರ, ಬಾಗೇವಾಡಿ, ಉಚ್ಚಾಂವ್ ವಿಧಾನಸಭಾ ಕ್ಷೇತ್ರಗಳ ಪ್ರದೇಶಗಳಲ್ಲಿ ಹಸಿರು ಪಡಿತರ ಚೀಟಿಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು?

(ಇ) ಅನರ್ಹ ಕಂಟುಂಬಗಳಿಗೆ ಹಸಿರು ಪಡಿತರ ಚೀಟಿ ದೊರೆತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಅಜೀಜ್ ಸೇಟ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

(ಅ) (೧) ವಾರ್ಷಿಕ ಆದಾಯ ರೂ. ೩೫೦೦ ಗಳೊಳಗೆ ಇರುವ ಎಲ್ಲಾ ಗ್ರಾಮೀಣ ಹಾಗೂ ೨೦,೦೦೦ ಮತ್ತು ಅದಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಪಟ್ಟಣ ಪ್ರದೇಶಗಳಲ್ಲಿ ಇರುವ ಎಲ್ಲಾ ಕುಟುಂಬಗಳು;

(೨) ಭೂರಹಿತ ಕೃಷಿ ಕಾರ್ಮಿಕರು ಪ್ಲಾಂಟೇಶನ್ ಕಾರ್ಮಿಕ ಕುಟುಂಬಗಳು ಗ್ರಾಮಾಂತರ ಕುಶಲಕರ್ಮಿಗಳು, ಸಣ್ಣ ಹಿಡುವಳಿದಾರರು

(ಇ) ಸರ್ಕಾರದಿಂದ ವೃದ್ಧಾಪ್ಯ ಹಾಗೂ ಅಂಗವಿಕಲ ವೇತನ ಪಡೆಯುತ್ತಿರುವವರು ಮತ್ತು ವಿಧವಾ ವೇತನ ಪಡೆಯುತ್ತಿರುವವರು.

ಅ) ವಿಧಾನಸಭಾ ಕ್ಷೇತ್ರ	ವಿತರಿಸಿರುವ ಹಸಿರು ಪಡಿತರ ಚೀಟಿ ಸಂಖ್ಯೆ	
	ಗ್ರಾಮಾಂತರ	ಪಟ್ಟಣ
ಬೆಳಗಾಂ ಸಿಟಿ ಕ್ಷೇತ್ರ		—
ಕಾನ್‌ಪುರ ,,	೧೪೭೮೦	೪೩೭
ಬಾಗೇವಾಡಿ ,,	೧೮೫೧೪	—
ಉಚ್ಚಾಂವ್ ,,	೬೧೧೫	—

(ಇ) ಹೌದು ಅನರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿ ದೊರೆತಿರುವ ಬಗ್ಗೆ ಕೆಲವು ದೂರುಗಳು ಬಂದಿರುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿರುವ ಮನೆ ಮನೆಯ ಸಮೀಕ್ಷೆಯನ್ನು ನಡೆಸಿ ಅನರ್ಹ

ಕುಟುಂಬಗಳನ್ನು ಗುರ್ತಿಸಿ ಸದರಿ ಹಸಿರು ಪಡಿತರ ಚೀಟಿಗಳನ್ನು ರದ್ದು ಮಾಡಲು ಹಾಗೂ ಅರ್ಹ ಕುಟುಂಬಗಳನ್ನು ಗುರ್ತಿಸಿ ಅದಕ್ಕೆ ಸಮಂಜಸವಾಗಿ ಅವರಿಗೆ ಹಸಿರು ಪಡಿತರ ಚೀಟಿಯನ್ನು ವಿತರಿಸಲು ಸಂಬಂಧಪಟ್ಟವರಿಗೆ ಆದೇಶ ನೀಡಲಾಗಿರುತ್ತದೆ. ಮನೆ ಮನೆ ಸಮೀಕ್ಷೆ ಕೆಲಸ ಇನ್ನೂ ನಡೆಯುತ್ತಿರುತ್ತದೆ.

ಹುಬ್ಬಳ್ಳಿ-ಧಾರವಾಡ ಪಡಿತರ ಪ್ರದೇಶಗಳಲ್ಲಿ ಪಡಿತರ ಚೀಟಿಗಳನ್ನು ನೀಡುವುದು.

೧೨೦೩. ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ಹುಬ್ಬಳ್ಳಿ ಗ್ರಾಮಾಂತರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಹುಬ್ಬಳ್ಳಿ-ಧಾರವಾಡ ಪಡಿತರ ಪ್ರದೇಶಗಳಲ್ಲಿ ಸುಮಾರು ೧೬,೦೦೦ ಕುಟುಂಬಗಳಿಗೆ ಪಡಿತರ ಚೀಟಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ಸದರಿ ಕುಟುಂಬಗಳಿಗೆ ಹೊಸ ಪಡಿತರ ಚೀಟಿಗಳನ್ನು ವಿತರಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಅಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

(ಅ) ಹೌದು. ಕೆಲವು ನಿವಾಸಿಗಳು ಪಡಿತರ ಚೀಟಿ ಹೊಂದಿಲ್ಲವೆಂದು ತಿಳಿದಿದೆ.

(ಆ) ಸರ್ಕಾರವು ಸೂಕ್ತ ಪರಿಶೋಧನೆಯ ನಂತರ ಈ ಅರ್ಜಿದಾರರ ಅರ್ಹತೆಯನ್ನು ಗುರುತಿಸಿ ಹೊಸ ಪಡಿತರ ಚೀಟಿಗಳನ್ನು ವಿತರಿಸುವಂತೆ ಸೂಚನೆ ನೀಡಿರುತ್ತದೆ.

ಭೀಮಾ ನದಿಯ ಮೇಲೆ ಬಂಧಾರ ನಿರ್ಮಿಸುವುದು.

೬೧೬೬. ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಇಂಡಿ ಮತ್ತು ಅಫ್ಜಲ್‌ಪುರಗಳ ನಡುವೆ ಭೀಮಾನದಿಗೆ ಒಂದು ಬ್ಯಾರೇಜು ನಿರ್ಮಿಸುವ ಬಗ್ಗೆ ಯೋಜನೆಯಿದೆಯೇ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಹೌದು. ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಬುಯ್ಯಾಹರ ಗ್ರಾಮದ ಬಳಿ ಭೀಮಾ ನದಿಗೆ ಅಡ್ಡಲಾಗಿ ಬಂಧಾರ ನಿರ್ಮಿಸುವ ಬಗ್ಗೆ ಪ್ರಸ್ತಾವನೆಯಿದೆ.

ಇಂಡಿ ತಾಲ್ಲೂಕಿನ ನಿಂಬಾಳ ಸಣ್ಣ ನೀರಾವರಿ ಕೆರೆ ನಿರ್ಮಾಣ

೬೧೬೬. ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) .—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಇಂಡಿ ತಾಲ್ಲೂಕಿನ ನಿಂಬಾಳ ಸಣ್ಣ ನೀರಾವರಿ ಕೆರೆಯ ಕೆಲಸವನ್ನು ಪ್ರತಿ ವರ್ಷವೂ ಆಯವ್ಯಯದಲ್ಲಿ ಸೇರಿಸುತ್ತಿರುವುದು ನಿಜವಲ್ಲವೇ ?

(ಆ) ಸದರಿ ಕೆರೆಯ ಕೆಲಸವು ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಇ) ಹಾಗಿದ್ದಲ್ಲಿ ಮೇಲೆ ತಿಳಿಸಿರುವ ಕೆಲಸವನ್ನು ಕೊನೆಯ ಪಕ್ಷ ಪ್ರಸಕ್ತ ವರ್ಷದಲ್ಲಾದರೂ ಪ್ರಾರಂಭಿಸಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು) .—

(ಅ) ಹೌದು, ಈ ಕೆಲಸವು ೧೯೮೬-೮೮ ರಿಂದಲೂ ಆಯವ್ಯಯದಲ್ಲಿ ಸೇರಿರುತ್ತದೆ.

(ಆ) ಬಂದಿದೆ.

(ಇ) ಈ ಕಾಮಗಾರಿಯ ಅಂದಾಜು ಪರಿಶೀಲನೆಯಲ್ಲಿದ್ದು, ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ಸಾಕಷ್ಟು ಅನುದಾನವಿಲ್ಲದಿರುವುದರಿಂದ, ಈ ಕಾಮಗಾರಿಯನ್ನು ಪ್ರಸಕ್ತ ವರ್ಷದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ.